## ಅಲ್ಪಸಂಖ್ಯಾತರಿಗೆ ಹಾಕಿಕೊಂಡ ಕಾರ್ಯಕ್ರಮಗಳು

1818(2145): ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕೋಲಾರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಅಲ್ಪಸಂಖ್ಯಾತರಿಗೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು; ಅದಕ್ಕಾಗಿ ಖರ್ಚಾದ ಹಣದ ಮೊತ್ತವೆಷ್ಟು; ತಾಲ್ಲೂಕುವಾರು ವಿವರ ನೀಡುವುದು.

ಆ. ಬಾಗೇಪಲ್ಲಿ ವಿಧಾನ ಸಭಾಕ್ಷೇತ್ರದಲ್ಲಿ ಮಸೀದಿ ಗಳು ಮತ್ತು ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಇ. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕು ಅತಿ ಹೆಚ್ಚು ಮುಸ್ಲಿಂ ಬಾಂಧವರು ಇದ್ದು ಶಾದಿಮಹಲ್ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಈ. ಕಳೆದ ಮೂರು ವರ್ಷಗಳಿಂದ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರಿಗೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು, ಅದಕ್ಕಾಗಿ ಖರ್ಚಿನ ಮೊತ್ತವೆಷ್ಟು?

ಶ್ರೀ ಎಂ.ಎಲ್ ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು)

ಅ. ವಿವರಗಳನ್ನು ಅನುಬಂಧ 1 ಮತ್ತು 2ರಲ್ಲಿ ನೀಡಲಾಗಿದೆ.

ಆ. ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನಲ್ಲಿ 42 ನೋಂದಾಯಿತ ಮಸೀದಿಗಳು ಮತ್ತು ವಕ್ಫ್‌ನ ಅನೇಕ ಅನಾಥಾಲಯಗಳು ದರ್ಗಾಗಳು, ಸ್ಮಶಾನಗಳು ಇರುತ್ತದೆ.

ಇ. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಶಾದಿಮಹಲ್ ನಿರ್ಮಿಸಲು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಈ. ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸ್ವಾವಲಂಬನಾ ಸಾಲದ ಯೋಜನೆ
2. ವೃತ್ತಿ ತರಬೇತಿ ಯೋಜನೆ
3. ಗಂಗಾ ಕಲ್ಯಾಣ ಯೋಜನೆ
4. ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ನೇರ ಸಾಲ ಯೋಜನೆ
5. ಕಾನೂನು ಪದವೀಧರರಿಗೆ ಸ್ಟೈಪಂಡರಿ ನೀಡುವ ಯೋಜನೆ. ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರಿಗೆ ಕಳೆದ ಮೂರು ವರ್ಷಗಳಿಂದ ಮೇಲಿನ ಯೋಜನೆಗಳನ್ನು ಅಳವಡಿಸಿಕೊಂಡು ರೂ. 4,60,970-00ಗಳನ್ನು ಖರ್ಚು ಮಾಡಲಾಗಿದೆ.

ಅನುಬಂಧ - 1

ಹಮ್ಮಿಕೊಂಡಿರುವ ಕಾರ್ಯಕ್ರಮಗಳು:-

1. ಸ್ವಾವಲಂಬನ ಸಾಲದ ಯೋಜನೆ
2. ವೃತ್ತಿ ತರಬೇತಿ ಯೋಜನೆ

3. ಗಂಗಾ ಕಲ್ಯಾಣ ಯೋಜನೆ

4. ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಯೋಜನೆ

ತಾಲ್ಲೂಕುವಾರು ಖರ್ಚಾಗಿರುವ ಹಣದ ವಿವರ

| | | |
|---|---|---|
| 1. | ಬಾಗೇಪಲ್ಲಿ | 4,60,970.00 |
| 2. | ಗುಡಿಬಂಡೆ | 1,19,729.00 |
| 3. | ಬಂಗಾರಪೇಟೆ | 10,35,752.00 |
| 4. | ಚಿಕ್ಕಬಳ್ಳಾಪುರ | 11,19,783.00 |
| 5. | ಚಿಂತಾಮಣಿ | 26,06,288.00 |
| 6. | ಗೌರಿಬಿದನೂರು | 7,98,076.00 |
| 7. | ಕೋಲಾರ | 37,61,201.00 |
| 8. | ಮಾಲೂರು | 4,32,042.00 |
| 9. | ಮುಳಬಾಗಿಲು | 18,86,561.00 |
| 10. | ಶಿಡ್ಲಘಟ್ಟ | 26,08,953.00 |
| 11. | ಶ್ರೀನಿವಾಸಪುರ | 6,77,846.00 |

## ಅನುಬಂಧ - 2

ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) ಮಾನ್ಯ ವಿಧಾನ ಸಭಾ ಸದಸ್ಯರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2145ಕ್ಕೆ ಉತ್ತರ ನೀಡುವ ಕುರಿತು ಅನುಬಂಧ

| ಕ್ರಮ ಸಂಖ್ಯೆ | ತಾಲ್ಲೂಕು | ವರ್ಷವಾರು ಫಲಾನುಭವಿಗಳ ಮತ್ತು ಮೊತ್ತದ ವಿವರ | | | | | |
|---|---|---|---|---|---|---|---|
| | | 1999-2000 | | 2000-01 | | 2001-02 | |
| | | ಅಭ್ಯರ್ಥಿಗಳ ಸಂಖ್ಯೆ | ಮೊತ್ತ ರೂ. | ಅಭ್ಯರ್ಥಿಗಳ ಸಂಖ್ಯೆ | ಮೊತ್ತ ರೂ | ಅಭ್ಯರ್ಥಿಗಳ ಸಂಖ್ಯೆ | ಮೊತ್ತ ರೂ |
| | 1. ಕಾನೂನು ಪದವೀದರರಿಗೆ ಶಿಷ್ಯವೇತನ | | | | | | |
| 1. | ಕೋಲಾರ | - | - | - | - | 1 | 1643.00 |
| 2. | ಮುಳಬಾಗಿಲು | - | - | 1 | 7266.00 | 1 | 12000.00 |
| 3. | ಬಾಗೇಪಲ್ಲಿ | - | - | - | - | 1 | |
| | ಒಟ್ಟು | - | - | 1 | 7266.00 | 3 | 13643.00 |
| | 2. ಅಲ್ಪಸಂಖ್ಯಾತರ ಐಟಿಐ ಡಿ ತರಬೇತಿದಾರರಿಗೆ ಶಿಷ್ಯವೇತನ | | | | | | |
| 1. | ಕೋಲಾರ | 4 | 4200.00 | 2 | 1200.00 | 2 | 1050.00 |
| 2. | ಮಾಲೂರು | 3 | 3600.00 | 1 | 600.00 | 1 | 1200.00 |
| 3. | ಚಿಕ್ಕಬಳ್ಳಾಪುರ | - | - | 14 | 4550.00 | 15 | 12260.00 |
| 4. | ಗೌರಿಬಿದನೂರು | 12 | 8050.00 | 17 | 10950.00 | 10 | 6000.00 |
| 5. | ಬಂಗಾರಪೇಟೆ | 11 | 13950.00 | 9 | 2700.00 | 18 | 9140.00 |
| 6. | ಮುಳಬಾಗಿಲು | - | - | - | - | 2 | 1350.00 |
| | ಒಟ್ಟು | 30 | 29800.00 | 33 | 20000.00 | 48 | 31000.00 |

3. ವೃತ್ತಿ ತರಬೇತಿ ಕಾರ್ಯಕ್ರಮ

| | | | | | | | |
|---|---|---|---|---|---|---|---|
| 1. ಚಿಂತಾಮಣಿ | - | - | - | - | 10 | 45000.00 |
| ಒಟ್ಟು | - | - | - | - | 10 | 45000.00 |

4. ಕಟ್ಟಡ ನಿರ್ಮಾಣಕ್ಕೆ ಅನುದಾನ

| | | | | | | |
|---|---|---|---|---|---|---|
| 1. ಚಿಕ್ಕಬಳ್ಳಾಪುರ | - | - | 1 | 10000-00 | - | - |
| ಒಟ್ಟು | - | - | 1 | 10000-00 | - | - |

5.ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ

| | | | | | | |
|---|---|---|---|---|---|---|
| 1. ಚಿಕ್ಕಬಳ್ಳಾಪುರ | - | - | 50 | 157500.00 | 50 | 1677000.00 |
| ಒಟ್ಟು | - | - | 50 | 157500.00 | 50 | 1677000.00 |

6. ಶಾದಿಮಹಲ್:ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ

| | | | | | | |
|---|---|---|---|---|---|---|
| 1. ಚಿಕ್ಕಬಳ್ಳಾಪುರ | - | - | - | - | 1 | 200000.00 |
| ಒಟ್ಟು | - | - | - | - | 1 | 200000.00 |

**ಮೈಸೂರು ಜಿಲ್ಲೆಯಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳು**

1820(2254): **ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ)** : ಮಾನ್ಯ ಸಣ್ಣ ಕೈಗಾರಿಕೆ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಮೈಸೂರು ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳು ಯಾವುವು

ಆ. ಈ ಕಾರ್ಖಾನೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು;

ಇ. ಇಲ್ಲಿನ ಕಾರ್ಮಿಕರಿಗೆ ನೀಡುತ್ತಿರುವ ಸವಲತ್ತುಗಳು ಏನೇನು;

ಈ. ಸಣ್ಣ ಪ್ರಮಾಣದ ಕೈಗಾರಿಕೆಗಳ ಉತ್ತೇಜನಕ್ಕೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

**ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)**

ಅ. ಮೈಸೂರು ಜಿಲ್ಲೆಯಲ್ಲಿ 18315 ಸಣ್ಣ ಪ್ರಮಾಣದ ಕೈಗಾರಿಕೆಗಳು ನೊಂದಣಿಯಾಗಿರುತ್ತವೆ. ವಿವರಗಳು ಕೆಳಕಂಡಂತಿವೆ:

| | | | |
|---|---|---|---|
| 1. | ಆಹಾರ ಮತ್ತು ಪೇಯಗಳು | - | 3091 |
| 2. | ಜವಳಿ ಆಧಾರಿತ ರೇಷ್ಮೆ ರೀಲ್‌ಗಳು | - | 3150 |
| 3. | ಅರಣ್ಯ ಉತ್ಪನ್ನಗಳು ಬೊಂಬು, ಬಿದಿರು | - | 2798 |
| 4. | ಚರ್ಮ ಮತ್ತು ಚರ್ಮದ ಉತ್ಪನ್ನಗಳು | - | 516 |
| 5. | ಕಾಗದದ ಉತ್ಪನ್ನಗಳು | - | 462 |
| 6. | ರಾಸಾಯನಿಕ ಉತ್ಪನ್ನಗಳು | - | 963 |
| 7. | ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳು | - | 297 |
| 8. | ಗಾಜು ಮತ್ತು ಪಿಂಗಾಣಿ | - | 561 |
| 9. | ಜನರಲ್ ಇಂಜಿನಿಯರಿಂಗ್ | - | 1871 |
| 10. | ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ | - | 407 |
| 11. | ರಿಪೇರಿ ಮತ್ತು ಸೇವೆ | - | 860 |